ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**SC No. 273/2023** **P.W.1**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **17.03.2026.** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ವೈ.ಎನ್.ಎಸ್. ವಕೀಲರಿಂದ ಶ್ರೀ. ವಕೀಲರ ಪರವಾಗಿ :

ನಾನು ಗೃಹಿಣಿ. ನನ್ನ ಅತ್ತೆ ಒಂದು ಕಛೇರಿಯಲ್ಲಿ ಕ್ಲೀನಿಂಗ್ ಕೆಲಸ ಮಾಡುತ್ತಿದ್ದರು. ನಾವು ವಾಸವಿದ್ದ ಮನೆಯಿಂದ ನನ್ನ ಅತ್ತೆ ಕೆಲಸಕ್ಕೆ ಹೋಗುವ ಕಛೇರಿ ಎಷ್ಟು ದೂರ ಇದೆ ಎಂದು ಗೊತ್ತಿಲ್ಲ. ಬೆಳಗ್ಗೆ 5.30-.6.00 ಗಂಟೆಗೆ ಕೆಲಸಕ್ಕೆ ಹೋಗಿ ಸಂಜೆ 5.30-6.00 ಗಂಟೆಗೆ ವಾಪಸ್ ಬರುತ್ತಿದ್ದರು. ಕೆಲಸ ಕಡಿಮೆ ಇದ್ದಲ್ಲಿ ಬೇಗ ಬರುತ್ತಿದ್ದರು, ಜಾಸ್ತಿ ಇದ್ದಲ್ಲಿ ತಡವಾಗಿ ಸಹ ಬರುತ್ತಿದ್ದರು. ನನ್ನ ಗಂಡ ಹಣ್ಣಿನ ಅಂಗಡಿಯಲ್ಲಿ ಕೆಲಸ ಮಾಡುತ್ತಾರೆ. ಅವರು ಬೆಳಗ್ಗೆ 5.00 ಗಂಟೆಗೆ ಹೋದರೆ ರಾತ್ರಿ 8.00-9.00 ಗಂಟೆಗೆ ವಾಪಸ್ ಬರುತ್ತಾರೆ. ಯಾವುದೇ ಗಲಾಟೆಯಾಗಿಲ್ಲ ಮತ್ತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಲಾಟೆಯಾಯಿತು ಮತ್ತು ನನ್ನ ಗಂಡ ಕರೆದುಕೊಂಡು ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನಗೆ ನೋಟೀಸ್ ಕೊಟ್ಟಿದ್ದರೋ ಗೊತ್ತಿಲ್ಲ. ಪೊಲೀಸರು ಯಾವುದೇ ಬಾಂಡ್ ಬರೆಸಿಕೊಂಡಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿ ಸಹಿ ಮಾಡಿದ್ದೇನೆ. ಎಷ್ಟು ಬಾರಿ ಸಹಿ ಮಾಡಿದ್ದೇನೆ ಗೊತ್ತಿಲ್ಲ. ಎರಡು ಬಾರಿ ಪೊಲೀಸ್ ಠಾಣೆಗೆ ಹೋಗಿದ್ದೇನೆ. ಗಲಾಟೆಯಾದ ದಿನ ಹೋಗಿದ್ದಾಗ ದೂರು ಪಡೆದುಕೊಂಡಿಲ್ಲ, ಆದಾದ ಒಂದೆರಡು ದಿನಕ್ಕೆ ಮತ್ತೆ ಹೋಗಿದ್ದೇನೆ. ನಾನು ದೂರನ್ನು ಕೊಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಪೊಲೀಸರು ಪಡೆದುಕೊಂಡು ಹೋದರು. ಪೊಲೀಸ್ ಬಟ್ಟೆಗಳನ್ನು ತೆಗೆದುಕೊಂಡು ಹೋಗಿಲ್ಲ ಮತ್ತು ಕೇಸ್ ಗಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ವೈರತ್ವದಿಂದ ಸುಳ್ಳು ದೂರು ಕೊಟ್ಟು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**SC No.273/2023**
**P.W. 1**

<u>ಮರು ವಿಚಾರಣೆಃ ಇಲ್ಲ.</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

ಸಹಿ/-
**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.